ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027. ಭಾರತ
ದೂರವಾಣಿ : 080-22221321 / 22221325
ವೆಬ್-ಸೈಟ್ : www.ksrtc.in

Karnataka State Road Transport Corporation
"Transport House" Central Offices,
K.H.Road, Shanthinagar, Bangalore-560 027. India
Tel : 080-22221321 / 25
Website : www.ksrtc.in

ಸಂ.ಕರಾಸಾ/ಕೇಕ/ಸಂ/ವಾ-108 /20-21 ದಿನಾಂಕ: 31.03.2021 01.04.

**ಸುತ್ತೋಲೆ ಸಂಖ್ಯೆ: 1604 /2021**

**(ಸಂಚಾರ (ವಾಣಿಜ್ಯ) ಇಲಾಖೆಯಿಂದ ಹೊರಡಿಸಲ್ಪಟ್ಟಿದೆ)**

ವಿಷಯ: ಕಟ್ಟಿದ ಮಳಿಗೆಗಳಿಗೆ ಇರುವ 05 ವರ್ಷಗಳ ಪರವಾನಗಿ ಅವಧಿಯನ್ನು ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ವಿಸ್ತರಿಸುವ ಬಗ್ಗೆ.

ಉಲ್ಲೇಖ: 1. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ: 787/2017 ದಿ:26.07.2017.
2. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ: 809/2021 ದಿ:09.02.2021.
3. ದಿನಾಂಕ 19.03.2021 ರಂದು ನಡೆದ ಸಿಸಿಜಿ ಸಭೆಯ ನಡಾವಳಿ.

-&-

ಕೋವಿಡ್-19ರ ಆರ್ಥಿಕ ಸಂಕಷ್ಟದ ಹಿನ್ನೆಲೆಯಲ್ಲಿ ನಿಗಮದ ಬಸ್ ನಿಲ್ದಾಣಗಳಲ್ಲಿನ ವಾಣಿಜ್ಯ ಮಳಿಗೆಗಳ ಹಾಲಿ ಪರವಾನಗಿದಾರರಲ್ಲಿ ಕೆಲವರು ಅವಧಿಪೂರ್ವಕವಾಗಿ ಪರವಾನಗಿಯನ್ನು ರದ್ದುಪಡಿಸಿಕೊಳ್ಳುತ್ತಿದ್ದಾರೆ. ಮತ್ತು ಹೊಸದಾಗಿ ಪರವಾನಗಿದಾರರ ಆಯ್ಕೆಗೆ ಆಹ್ವಾನಿಸಲಾಗುವ ಇ-ಟೆಂಡರ್ ಮತ್ತು ಸಂಧಾನ ಪ್ರಕ್ರಿಯೆಗಳಲ್ಲಿ ಭಾಗವಹಿಸುವ ಬಿಡ್‌ದಾರರಿಂದ ಕಡಿಮೆ ಬಿಡ್‌ಗಳು / ಪ್ರತಿಕ್ರಿಯೆಗಳು ಸ್ವೀಕಾರವಾಗುತ್ತಿವೆ. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಕಟ್ಟಿದ ಮಳಿಗೆಗಳ ಪರವಾನಗಿ ಅವಧಿಯನ್ನು ಮತ್ತೊಂದು ಅವಧಿಗೆ ನವೀಕರಿಸುವಂತೆ ಕೋರಿ ಕರಾರಸಾ ನಿಗಮಗಳ ಹೋಟೆಲ್ ಮತ್ತು ಮಳಿಗೆ ಮಾಲೀಕರ ಸಂಘ(ರಿ) ರವರು ಸಲ್ಲಿಸಿರುವ ಮನವಿಯ ಕುರಿತು ದಿನಾಂಕ 19.03.2021 ರಂದು ನಡೆದ ನಿಗಮದ ಸಿಸಿಜಿ ಸಭೆಯಲ್ಲಿ ಚರ್ಚಿಸಲಾಯಿತು. ಅದರಂತೆ ಈ ಸಂಬಂಧ ಕೆಳಕಂಡಂತೆ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

1. ಪ್ರಸಕ್ತ ವರ್ಷದಲ್ಲಿ ಅಂದರೆ, ಮಾರ್ಚ್-2022ನೇ ಮಾಹೆಯವರೆಗೆ ಪರವಾನಗಿ ಅವಧಿ ಮುಕ್ತಾಯವಾಗುವ ಎಲ್ಲಾ ಕಟ್ಟಿದ ಮಳಿಗೆಗಳ ಪರವಾನಗಿದಾರರು, ಪರವಾನಗಿ ಅವಧಿಯನ್ನು ವಿಸ್ತರಿಸಲು ಆಸಕ್ತಿ / ಇಚ್ಛಿಸಿ ಮನವಿ ನೀಡಿದಲ್ಲಿ, ಕರಾರು ಮುಕ್ತಾಯದ ದಿನದಿಂದ ಒಂದು ವರ್ಷದ ಅವಧಿಗೆ ಪರವಾನಗಿ ನವೀಕರಣಕ್ಕೆ ಕ್ರಮ ಕೈಗೊಳ್ಳುವುದು.

2. ಶೇ.10 ರಷ್ಟು ಮಾಸಿಕ ಪರವಾನಗಿ ಶುಲ್ಕವನ್ನು ಹೆಚ್ಚಿಸಿ, ಹಾಲಿ ಇರುವ ಕರಾರಿನ ನಿಯಮಾವಳಿಯನ್ವಯ ನವೀಕರಣಕ್ಕೆ ಕ್ರಮ ಕೈಗೊಳ್ಳುವುದು.

3. ಮೇಲ್ಕಂಡಂತೆ, ನವೀಕರಣದ ಸಮಯದಲ್ಲಿ ಕೇಂದ್ರ ಕಛೇರಿಯ ಅನುಮೋದನೆಗೆ ಸೂಕ್ತ ಪ್ರಸ್ತಾವನೆ ಸಲ್ಲಿಸುವುದು.

ಸದರಿ ಸುತ್ತೋಲೆಯು ತಕ್ಷಣದಿಂದ ಜಾರಿಗೆ ಬರುತ್ತದೆ. ಆದೇಶ ಸ್ವೀಕರಿಸಿ ಜಾರಿಗೊಳಿಸಿದ ಬಗ್ಗೆ ಅನುಸರಣಾ ವರದಿ ಕಳುಹಿಸುವುದು.

(ಶಿವಯೋಗಿ ಸಿ. ಕಳಸದ, ಭಾ.ಆ.ಸೇ.,)
**ವ್ಯವಸ್ಥಾಪಕ ನಿರ್ದೇಶಕರು**
**ಕರಾರಸಾ ನಿಗಮ**

**ಪ್ರತಿಯನ್ನು:**

1) ಮಾನ್ಯ ಅಧ್ಯಕ್ಷರು / ಉಪಾಧ್ಯಕ್ಷರು ಇವರ ಆಪ್ತ ಕಾರ್ಯದರ್ಶಿಗಳು, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
2) ವ್ಯವಸ್ಥಾಪಕ ನಿರ್ದೇಶಕರು, ಬೆಂಮಸಾಸಂಸ್ಥೆ / ವಾಕರಸಾಸಂಸ್ಥೆ / ಈಕರಸಾಸಂಸ್ಥೆ, ಬೆಂಗಳೂರು / ಹುಬ್ಬಳ್ಳಿ / ಕಲ್ಬುರ್ಗಿ ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
3) ನಿರ್ದೇಶಕರು (ಭ ಮತ್ತು ಜಾ) / ನಿರ್ದೇಶಕರು (ಸಿ ಮತ್ತು ಪ), ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
4) ಎಲ್ಲಾ ಇಲಾಖಾ ಮುಖ್ಯಸ್ಥರುಗಳು, ಕ.ರಾ.ರ.ಸಾ.ನಿಗಮ, ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
5) ಮುಖ್ಯ ಸಂಚಾರ ವ್ಯವಸ್ಥಾಪಕರು, ಬೆಂಮಸಾಸಂಸ್ಥೆ / ವಾಕರಸಾಸಂಸ್ಥೆ / ಈಕರಸಾಸಂಸ್ಥೆ, ಬೆಂಗಳೂರು / ಹುಬ್ಬಳ್ಳಿ / ಕಲ್ಬುರ್ಗಿ ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
6) ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು / ವಿಭಾಗೀಯ ಸಂಚಾರ ಅಧಿಕಾರಿಗಳು, ಕ.ರಾ.ರ.ಸಾ.ನಿಗಮ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.